## ನಿಮ್ಮೊಡನೆ

# ಮಕ್ಕಳ ಶೈಕ್ಷಣಿಕ ಸಾಧನೆಯ ಅಳತೆಗೋಲು ಸ್ವಸ್ಥ ಸಮಾಜದ ಚಲನೆಗಳಿಗೆ ಸನ್ನೆಕೋಲು

ಕರ್ನಾಟಕ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ, ನೆಲಮುಗಿಲು ಒಂದು ಮಾಡುವಂತಹ ರಾಜಕಾರಣಿಗಳ ಪ್ರದರ್ಶನದ ನಡುವೆಯೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಫಲಿತಾಂಶ ಹೊರಬಿದ್ದು, ವಿದ್ಯಾರ್ಥಿಗಳ ಯಶಸ್ಸಿನ ಕಥೆಗಳು ಪ್ರಕಟಗೊಂಡಿವೆ. ಕುಟುಂಬದಲ್ಲಿನ ವ್ಯತಿರಿಕ್ತ ಪರಿಸ್ಥಿತಿಯ ನಡುವೆಯೂ ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳು ಎಂದಿನಂತೆ ಸುದ್ದಿಯಾಗಿದ್ದಾರೆ. ಕೂಲಿ ಕಾರ್ಮಿಕ ವಿದ್ಯಾರ್ಥಿಯ ಯಶೋಗಾಥೆ, ಶಾಲೆ ಬಿಡಲು ಯೋಚಿಸಿದ್ದ ವಿದ್ಯಾರ್ಥಿನಿಯ ಗಮನಾರ್ಹ ಸಾಧನೆ ಸಹಜವಾಗಿಯೇ ಜನರ ಗಮನಸೆಳೆದಿವೆ. ಉತ್ತಮ ಫಲಿತಾಂಶ ಪಡೆದಿರುವ ಮಕ್ಕಳ ಸಾಧನೆ ಪ್ರಶಂಸೆಗೆ ಅರ್ಹವಾದುದು. ಐಕಾನ್‌ಗಳ ಕೊರತೆಯ ವರ್ತಮಾನದಲ್ಲಿ ಮುಂದಿನ ತಲೆಮಾರುಗಳಿಗಾದರೂ ಮೌಲ್ಯಗಳ ಮಾದರಿಗಳು ರೂಪುಗೊಳ್ಳುವ ನಿಟ್ಟಿನಲ್ಲಿ ಇಂದಿನ ಮಕ್ಕಳ ಸಾಧನೆ ಆಶಾಕಿರಣದಂತೆ ಕಾಣಿಸುತ್ತದೆ.

ಹತ್ತು ಮತ್ತು ಹನ್ನೆರಡನೇ ತರಗತಿಯ ಮಕ್ಕಳ ಫಲಿತಾಂಶವನ್ನು ಶೈಕ್ಷಣಿಕ ಸಾಧನೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಮಾಜಿಕ ನೆಲೆಗಟ್ಟಿನಲ್ಲೂ ನೋಡುವುದು ಅಗತ್ಯ. ಸ್ವಸ್ಥ ಸಮಾಜವನ್ನು ರೂಪಿಸಬೇಕಾದ ಹೊಣೆಗಾರಿಕೆಯನ್ನು ಹೊರಬೇಕಾದ ಮಕ್ಕಳು ಯಾವ ನಿಟ್ಟಿನಲ್ಲಿ ಸಿದ್ಧತೆ ನಡೆಸಿದ್ದಾರೆ ಎನ್ನುವ ಸೂಚನೆಯನ್ನು ಈ ಫಲಿತಾಂಶಗಳಲ್ಲಿ ಹುಡುಕಬಹುದೆನ್ನಿಸುತ್ತದೆ. ಅಂಥ ಹುಡುಕಾಟವನ್ನು ಎರಡು ರೀತಿಯಲ್ಲಿ ನಡೆಸಬಹುದು. ಒಂದು: ತಮ್ಮ ಭವಿಷ್ಯದ ಬಗ್ಗೆ ಮಕ್ಕಳು ಹಂಚಿಕೊಳ್ಳುವ ಕನಸುಗಳು. ಎರಡು: ಭಾಷೆ ಮತ್ತು ಸಮಾಜ ವಿಜ್ಞಾನ ವಿಷಯದಲ್ಲಿ ಮಕ್ಕಳು ಪಡೆದಿರುವ ಅಂಕಗಳು.

ಪರೀಕ್ಷೆಗಳಲ್ಲಿ ಉತ್ತಮ ಸ್ಥಾನ ಪಡೆದ ಬಹುತೇಕ ಮಕ್ಕಳು ಎಂಜಿನಿಯರಿಂಗ್ ಇಲ್ಲವೇ ವೈದ್ಯಕೀಯ ಓದುವ ತಮ್ಮ ಹಂಬಲದ ಕುರಿತು ಹೇಳಿಕೊಳ್ಳುತ್ತಾರೆ. ಮತ್ತಷ್ಟು ಮಕ್ಕಳು, ನಾಗರಿಕ ಸೇವಾ ಪರೀಕ್ಷೆ ಬರೆದು ಐಎಎಸ್, ಐಪಿಎಸ್ ಅಧಿಕಾರಿ ಆಗುವ ಕನಸು ಹಂಚಿಕೊಳ್ಳುತ್ತಾರೆ. ಅಪರೂಪಕ್ಕೆ ಕೆಲವರು, ಸ್ವಂತ ಉದ್ಯಮ–ಸಂಸ್ಥೆ ರೂಪಿಸುವ ಮಾತನಾಡುತ್ತಾರೆ. ಇವೆಲ್ಲವೂ ಒಳ್ಳೆಯ ಬದುಕನ್ನು ಕಟ್ಟಿಕೊಳ್ಳಲು ಅಗತ್ಯವಾದ ಕನಸುಗಳೇ ಆಗಿವೆ. ಆದರೆ, ಉತ್ತಮ ಸಮಾಜವನ್ನು ಸೃಷ್ಟಿಸುವುದಕ್ಕೆ ಈ ಕನಸುಗಳು ಎಷ್ಟರಮಟ್ಟಿಗೆ ಪೂರಕವಾಗಿವೆ? ಮಕ್ಕಳು ಕನಸು ಕಾಣುತ್ತಿರುವ ಈ ಉದ್ಯೋಗಗಳ ಹಿಂದೆ ಬಹುತೇಕರಿಗೆ ಕಾಣುತ್ತಿರುವುದು ಸಂಬಂಧಿಸಿದ ಕ್ಷೇತ್ರಗಳಲ್ಲಿನ ಸೃಜನಶೀಲ ಅವಕಾಶಗಳಲ್ಲ; ಆ ಕ್ಷೇತ್ರಗಳಲ್ಲಿ ಇರುವ ಹಣದ ಥೈಲಿಗಳು. ನಾನು ಶಿಕ್ಷಕನಾಗಬೇಕು, ದಾದಿಯಾಗಬೇಕು ಎಂದು ಮಕ್ಕಳು ಹೇಳದಿರಲಿಕ್ಕೆ ಕಾರಣ, ಆ ಉದ್ಯೋಗಗಳು ಹೆಚ್ಚಿನ ಸಂಬಳ ಹೊಂದಿಲ್ಲದಿರುವುದೇ ಆಗಿದೆ. ಅಂದರೆ, ಶಿಕ್ಷಣದ ಮೂಲಕ ನಾವು ಮಕ್ಕಳಲ್ಲಿ ಸೃಜನಶೀಲ ಕನಸುಗಳನ್ನು ಹಾಗೂ ಸೇವೆಯ ಹಂಬಲವನ್ನು ಮೂಡಿಸುವ ಬದಲು, ಹೇಗಾದರೂ ರೊಕ್ಕ ಗುಡ್ಡೆ ಹಾಕುವ ಮನಸ್ಥಿತಿಯನ್ನು ರೂಪಿಸುತ್ತಿದ್ದೇವೆ. ಈ ಸಂಗತಿ, ಭಾಷೆ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಮಕ್ಕಳು ಪಡೆದಿರುವ ಅಂಕಗಳನ್ನು ಗಮನಿಸಿದರೆ ಮತ್ತಷ್ಟು ಸ್ಪಷ್ಟವಾಗುತ್ತದೆ. ಗಣಿತ, ವಿಜ್ಞಾನಗಳಲ್ಲಿ ಅಂಕಗಳನ್ನು ಗುಡ್ಡೆ ಹಾಕಿಕೊಂಡವರ ಸಾಧನೆ ಭಾಷಾ ವಿಷಯಗಳಲ್ಲಿ ಸುಮಾರು ಎನ್ನುವಂತಿರುತ್ತದೆ. ಸಮಾಜ ವಿಜ್ಞಾನದಲ್ಲೂ ಅಂಕಗಳ ಸಂಪಾದನೆ ಅಷ್ಟಕ್ಕಷ್ಟೇ ಎನ್ನುವಂತಿರುತ್ತದೆ. ಕೆಲವು ಮಕ್ಕಳು ಎಲ್ಲ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದರೂ, ಭಾಷೆ ಮತ್ತು ಸಮಾಜ ವಿಜ್ಞಾನ ವಿಷಯಗಳ ಕುರಿತ ಅವರ ಆಸಕ್ತಿ ಸದ್ಯದ ಪರೀಕ್ಷೆಗಷ್ಟೇ ಸೀಮಿತವಾಗಿರುವ ಉದಾಹರಣೆಗಳು ಹೆಚ್ಚಾಗಿವೆ.

ಭಾಷೆ ಮತ್ತು ಸಮಾಜ ವಿಜ್ಞಾನ ವಿಷಯಗಳ ಬಗ್ಗೆ ಕುತೂಹಲ ಉಳಿಸಿಕೊಳ್ಳದ ಮಕ್ಕಳ ವಿಷಯದಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವೆ. ಅವುಗಳೆಂದರೆ: ಭಾಷಾ ವಿಷಯಗಳಲ್ಲಿ ಆಸಕ್ತಿ ಉಳಿಸಿಕೊಳ್ಳದ ಮಕ್ಕಳ ಭಾವಕೋಶ ಎಷ್ಟರಮಟ್ಟಿಗೆ ಸಮೃದ್ಧವಾಗಿರುತ್ತದೆ? ಸಮಾಜ ವಿಜ್ಞಾನ ವಿಷಯದಲ್ಲಿ ನಿರಾಸಕ್ತಿ ತೋರುವ ವಿದ್ಯಾರ್ಥಿ ಸಮಾಜದ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವುದು ಸಾಧ್ಯವೆ? ಈ ಪ್ರಶ್ನೆಗಳ ಜೊತೆಗೆ ಕೆಲವು ಉಪ ಪ್ರಶ್ನೆಗಳನ್ನೂ ಕೇಳಿಕೊಳ್ಳಬೇಕು: ವಿಘಟಿತ ಕುಟುಂಬಗಳು ಹಾಗೂ ಹಿರಿಯ ನಾಗರಿಕರ ಹೆಚ್ಚುತ್ತಿರುವ ತವಕತಲ್ಲಣಗಳಿಗೂ ಭಾಷಾ ವಿಷಯಗಳು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿರುವುದಕ್ಕೂ ದೂರದ ಸಂಬಂಧವಾದರೂ ಇರಬಹುದೇ? ಚುನಾವಣೆಗಳಲ್ಲಿ ಮತದಾನ ಮಾಡುವುದಕ್ಕೆ ಕೆಲವು ತರುಣ ತರುಣಿಯರು ಉತ್ಸಾಹ ವ್ಯಕ್ತಪಡಿಸದಿರುವುದಕ್ಕೂ, ಸಮಾಜ ವಿಜ್ಞಾನ ಪರೀಕ್ಷೆಯಲ್ಲಿನ ಮಕ್ಕಳ ಸಾಧನೆಗೂ ಸಂಬಂಧ ಇದೆಯೇ? ಕೆಲವು ಮಕ್ಕಳಿಗೆ ಸಂಬಂಧಿಸಿದಂತೆ ಈ ಪ್ರಶ್ನೆಗಳು ಅರ್ಥಹೀನ ಎನ್ನಿಸಬಹುದು. ಆದರೆ, ಭಾಷೆಗೂ ಭಾವನೆಗಳಿಗೂ ಸಮಾಜ ವಿಜ್ಞಾನಕ್ಕೂ ಸ್ವಸ್ಥ ಸಮಾಜದ ಹಂಬಲಕ್ಕೂ ಸಂಬಂಧವೇ ಇಲ್ಲವೆಂದು ಹೇಳಲಾಗದು; ಹಾಗೆಯೇ ನಮ್ಮ ಶಿಕ್ಷಣ ವ್ಯವಸ್ಥೆ ಆರ್ದ್ರತೆ ಕಳೆದುಕೊಂಡು ಜಡವಾಗಿರುವುದನ್ನು ಅಲ್ಲಗಳೆಯಲಾಗದು. ಸುಧಾರಣೆ ಆಗಬೇಕಾಗಿರುವುದು ರಾಜಕೀಯ ವ್ಯವಸ್ಥೆಯಲ್ಲಷ್ಟೇ ಅಲ್ಲ; ಶಿಕ್ಷಣ ವ್ಯವಸ್ಥೆಯಲ್ಲೂ.

■ ರಘುನಾಥ ಚ.ಹ.

ಭಾಷೆ ಮತ್ತು ಸಮಾಜ ವಿಜ್ಞಾನದ ಬಗ್ಗೆ ಕುತೂಹಲ ಉಳಿಸಿಕೊಳ್ಳದ ಮಕ್ಕಳ ವಿಷಯದಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವೆ: ಭಾಷಾ ವಿಷಯಗಳಲ್ಲಿ ಆಸಕ್ತಿ ಉಳಿಸಿಕೊಳ್ಳದ ಮಕ್ಕಳ ಭಾವಕೋಶ ಎಷ್ಟರಮಟ್ಟಿಗೆ ಸಮೃದ್ಧವಾಗಿರುತ್ತದೆ? ಸಮಾಜ ವಿಜ್ಞಾನ ವಿಷಯದಲ್ಲಿ ನಿರಾಸಕ್ತಿ ತೋರುವ ವಿದ್ಯಾರ್ಥಿ ಸಮಾಜದ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವುದು ಸಾಧ್ಯವೆ?

